# ಡಿಂಪಲ್ ಕಮಾಲ್



■ ವಿಶಾಖ ಎನ್.

ಡಿಂಪಲ್ ಕಪಾಡಿಯಾ ಅರವತ್ತುಮೂರರ ವಯಸ್ಸಿನಲ್ಲಿ 'ಆಕಾಶಕ್ಕೆ ಮೂರೇ ಗೇಣು' ಎನ್ನುವಷ್ಟು ಹಿಗ್ಗಿದ್ದಾರೆ. ಕ್ರಿಸ್ಟೋಫರ್ ನೋಲನ್ ನಿರ್ದೇಶನದ 'ಟೆನೆಟ್' ಸಿನಿಮಾದಲ್ಲಿ ಮುಖ್ಯವಾದ ಪಾತ್ರದಲ್ಲಿ ಅಭಿನಯಿಸಿದ ಖುಷಿ ಅವರದು.

ನೋಲನ್ ಕಚೇರಿಯಿಂದ ಆಡಿಷನ್‌ಗೆ ಬುಲಾವು ಬಂದಾಗ ಡಿಂಪಲ್ ಹುಬ್ಬೇರಿತ್ತು. 'ಈ ವಯಸ್ಸಿನಲ್ಲಿ ತನಗೆಂಥ ಪಾತ್ರ? ಇರಲಿ, ಆಡಿಷನ್ ತಾನೆ. ಅದರಲ್ಲಿ ಫೇಲಾಗಿ ಬಂದರಾಯಿತು' ಎಂದು ಮನೆಯಲ್ಲಿ ಬಡಬಡಿಸಿದ್ದರು. ಮೊಮ್ಮಕ್ಕಳು ಅಜ್ಜಿಯ ಬೆನ್ನುತಟ್ಟಿ ಕಳುಹಿಸಿಕೊಟ್ಟರು.

ಆಡಿಷನ್ ಶುರು. ಎದುರಲ್ಲಿ ಕ್ಯಾಮೆರಾ. ಅದರ ಪಕ್ಕ ನೋಲನ್. ಡಿಂಪಲ್ ಅರಳಿದ ಕಣ್ಣು ಸುಮಾರು ಹೊತ್ತು ರೆಪ್ಪೆಯಾಡಿಸಿರಲಿಲ್ಲ. ಒಂದು ಸೆಲ್ಫಿ ತೆಗೆದುಕೊಂಡು ಅಲ್ಲಿಂದ ನೆನಪಿನ ಬುತ್ತಿ ಕಟ್ಟಿಕೊಂಡು ಹೋದರಾಯಿತು ಎಂದುಕೊಂಡು ಆಡಿಷನ್ ಮುಗಿಸಿ ಬಂದರು.

ಖಂಡಿತ ಸೆಲೆಕ್ಟ್ ಆಗುವುದಿಲ್ಲ ಎಂದೇ ಭಾವಿಸಿದ್ದ ಅವರ ನಿರೀಕ್ಷೆ ಹುಸಿ. ನೋಲನ್ ಆಯ್ಕೆ ಮಾಡಿಯೇಬಿಟ್ಟರು. ಡಿಂಪಲ್‌ಗೆ ಅಳುಕು. ಒಂದೇ ಗುಕ್ಕಿನಲ್ಲಿ ದೊಡ್ಡ ಪುಸ್ತಕಗಳನ್ನು ಓದುತ್ತಾ ಸುಖವಾಗಿದ್ದ ಅವರಿಗೆ ಈ ವಯಸ್ಸಿನಲ್ಲಿ ಕ್ಯಾಮೆರಾ ಕಣ್ಣಿಗೆ ಕಣ್ಣು ಸೇರಿಸುವುದು ಬೇಕಿರಲಿಲ್ಲ. ಮತ್ತೆ ಮಗಳು ಟ್ವಿಂಕಲ್, ಮೊಮ್ಮಕ್ಕಳು ಥಮ್ಸ್ ಅಪ್ ಮಾಡಿ ಕಳುಹಿಸಿಕೊಟ್ಟರು.

ನೋಲನ್ ದೊಡ್ಡ ಸ್ಕ್ರಿಪ್ಟ್ ಕೈಗಿತ್ತರು. ನಾಲ್ಕು ಗಂಟೆ ಅದನ್ನು ಓದಿದ್ದೇ ಬಂತು. ಮೊದಲ ಐವತ್ತು ಪುಟಗಳಲ್ಲಿ ಏನಿದೆ ಎನ್ನುವುದು ತಲೆಗೆ ಇಳಿಯಲಿಲ್ಲ. ತಮ್ಮ ಪಾತ್ರದ ಸಂಭಾಷಣೆ ಇರುವ ಹಾಳೆಗಳ ಫೋಟೊಗಳನ್ನು ಮೊಬೈಲ್‌ನಲ್ಲಿ ಕ್ಲಿಕ್ಕಿಸಿಕೊಂಡರು. ಹಾಗೆ ಫೋಟೊ ತೆಗೆಯಕೂಡದು ಎಂದು ನೋಲನ್ ತಾಕೀತು ಮಾಡಿದರು. ಸಿದ್ಧತೆಗೆ ಅದು ಅನಿವಾರ್ಯ ಎಂದಮೇಲೆ, ಇನ್ನೊಂದು ಪ್ರತಿಯನ್ನು ಕೊಟ್ಟರು, ಚಿತ್ರೀಕರಣ ಮುಗಿದ ಮೇಲೆ ಅದನ್ನು ಮರಳಿಸಬೇಕು ಎಂಬ ಷರತ್ತಿನೊಂದಿಗೆ.

ಈಗ ಸಂಭಾಷಣೆಗಳು ಡಿಂಪಲ್ ಬಾಯಲ್ಲಿವೆ. ನೋಲನ್ ಕೆಲಸ ತೆಗೆದ ನೆನಪು ಮನದಲ್ಲಿ ಅಚ್ಚೊತ್ತಿದೆ. 'ಚಿನ್ನದ ಚೌಕಟ್ಟಿನ ನೆನಪು ಅದು' ಎಂದು ಡಿಂಪಲ್ ತಮ್ಮ ರೇಷ್ಮೆಯಂತಹ ಕೂದಲನ್ನು ಸರಿಮಾಡಿಕೊಂಡು ಹೇಳುತ್ತಾರೆ. 'ಯೂ ಕಿಲ್ಡ್ ಇಟ್ ಮಾಮ್' ಎಂದು ಟ್ವಿಂಕಲ್ ಕೊಟ್ಟ ಅಪ್ಪುಗೆ ಅಮ್ಮನಿಗೆ ಈಗ ಬಲು ಬೆಚ್ಚಗೆ. ■



# ಸಾಯಿ ಪಲ್ಲವಿ ಸಕಾರಣ

ಎರಡು ಕೋಟಿ ರೂಪಾಯಿಯ ಫೇರ್‌ನೆಸ್ ಕ್ರೀಮಿನ ಜಾಹೀರಾತು ಆಹ್ವಾನವನ್ನು ನಟಿ ಸಾಯಿ ಪಲ್ಲವಿ ತಿರಸ್ಕರಿಸಿ ಆರು ತಿಂಗಳುಗಳಾದವು. ಈಗ ಅವರು ಅದನ್ನು ತಿರಸ್ಕರಿಸಿದ್ದು ಏಕೆ ಎಂಬ ಚರ್ಚೆ ಕಳೆಗಟ್ಟಿದೆ.

'ನನ್ನ ತಂಗಿ ಕಪ್ಪು. ಅವಳು ನನಗಿಂತ ಐದು ವರ್ಷ ಚಿಕ್ಕವಳು. ಅಮ್ಮ ಅವಳು ಚೆನ್ನಾಗಿ ಊಟ ಮಾಡಲೆಂದು ಈ ತರಕಾರಿ ತಿಂದರೆ ಬೆಳ್ಳಗಾಗುವೆ, ಆ ಹಣ್ಣು ತಿಂದರೆ ಬಣ್ಣ ಉಕ್ಕುತ್ತದೆ ಎಂದೆಲ್ಲ ಪುಸಲಾಯಿಸುತ್ತಿದ್ದಳು. ನನ್ನ ತಂಗಿ ಪಾಪ, ನಂಬಿ ತಿನ್ನುತ್ತಿದ್ದಳು. ಕನ್ನಡಿ ಎದುರು ನನ್ನ ಪಕ್ಕ ನಿಂತು, ತನ್ನನ್ನು ತಾನೇ ಹೀಗಳೆದುಕೊಳ್ಳುತ್ತಿದ್ದಳು. ಮೆಡಿಕಲ್ ವಿದ್ಯಾರ್ಥಿನಿಯಾಗಿದ್ದ ನಾನೂ ಮುಖದ ಮೇಲಿನ ಮೊಡವೆಯ ಗೊಡವೆಗೆ ಬಿದ್ದವಳೇ. ಅದೆಷ್ಟು ಕ್ರೀಮ್‌ಗಳನ್ನು ಬಳಸಿದ್ದೆನೋ? ಏನೆಲ್ಲ ಹಚ್ಚಿದ್ದೆನೋ? 'ಪ್ರೇಮಂ' ಸಿನಿಮಾದಲ್ಲಿ ನಟಿಸಿದ ಮೇಲೆ ಜನ ನನ್ನನ್ನು ಹೇಗಿರುವೆನೋ ಹಾಗೆಯೇ ಒಪ್ಪಿದರು. ಮೆಚ್ಚಿದರು. ನನಗೆ ಆಗ ಜ್ಞಾನೋದಯವಾಯಿತು. ನನ್ನ ಬದುಕಿನಲ್ಲೇ ಕ್ರೀಮುಗಳು, ಕಪ್ಪು ಬಣ್ಣದ ಕೀಳರಿಮೆ ಇಷ್ಟೆಲ್ಲ ತೋರಿಸಿರುವಾಗ ಅದನ್ನು ಯಾಕೆ ಅನುಮೋದಿಸಬೇಕು ಎನ್ನಿಸಿತು. ಅದಕ್ಕೇ ಜಾಹೀರಾತು ಬಿಟ್ಟೆ' – ಇದು ಸಾಯಿ ಪಲ್ಲವಿ ಕೊಟ್ಟಿರುವ ಅನುಭವ ಕಾರಣ.

'ನನ್ನ ಹೆಸರಿಗಿಂತ ಮೊದಲು ನಿನ್ನ ಹೆಸರನ್ನು ಟೈಟಲ್ ಕಾರ್ಡ್‌ನಲ್ಲಿ ಹಾಕಿಸುವೆ' ಎಂದು ರಾನಾ ದಗ್ಗುಬಾಟಿ ಇತ್ತೀಚೆಗೆ ತೆಲುಗು ಸಿನಿಮಾ ಚಿತ್ರೀಕರಣವೊಂದರಲ್ಲಿ ಹೇಳಿದ್ದನ್ನು ಕೇಳಿ ಸಾಯಿ ಪಲ್ಲವಿ ಬೆರಗಾಗಿದ್ದಾರೆ. ಚಿತ್ರಲೋಕದಲ್ಲಿ ಹೆಣ್ಣುಮಕ್ಕಳಿಗೆ ಇಂತಹ ಬೆಂಬಲ ಸಿಗುತ್ತಿದೆಯಲ್ಲ ಎಂದು ನಿಟ್ಟುಸಿರಿಡುವಾಗ ಅವರ ಮೂಗಿನ ಹೊಳ್ಳೆಗಳು ಸಹಜವಾಗಿಯೇ ಅಗಲಗೊಳ್ಳುತ್ತಿವೆ. ■